ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಸುಮಾರು 259 ಮತ್ತು 9

	ಹೊರ ರೋಗಿಗಳು	ಒಳರೋಗಿಗಳು
ಪುರುಷರು	95	4
ಸ್ತ್ರೀಯರು	97	3
ಮಕ್ಕಳು	67	2
	259	9

ಆ) ಇದೆ
ಇ) 85
ಈ) ಉದ್ಭವಿಸುವುದಿಲ್ಲ

ಬೈಂದೂರು ಆಸ್ಪತ್ರೆ ಅಭಿವೃದ್ಧಿ

876. ಶ್ರೀ ಜಿ.ಎಸ್. ಆಚಾರ್ (ಬೈಂದೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸರ್ಕಾರಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಯೋಜನೆ ಸರ್ಕಾರಕ್ಕಿದೆಯೇ;
ಆ) ತಾಲ್ಲೂಕಿನ ಪ್ರಾಮುಖ್ಯ ಕೇಂದ್ರವಾದ ಬೈಂದೂರಿನಲ್ಲಿ ಈ ಸವಲತ್ತು ಅವಶ್ಯವೆಂಬ ಕುರಿತು ಸರ್ಕಾರ ಸಮೀಕ್ಷೆ ನಡೆಸಿ ತೀರ್ಮಾನಕ್ಕೆ ಬರುವುದೇ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಇಲ್ಲ
ಆ) ಸಧ್ಯಕ್ಕೆ ಇಲ್ಲ

ಅಲೆಮಾರಿ ಜನಾಂಗದವರಿಗೆ ವಿಶೇಷ ಸಮಗ್ರ ಕೈಗಾರಿಕಾ ಯೋಜನೆ.

921. ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಅಲೆಮಾರಿ ಜನಾಂಗದವರಿಗೆ ವಿಶೇಷ ಸಮಗ್ರ ಕೈಗಾರಿಕಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಪ್ರಸ್ತಾವನೆ ಕಳೆದ 22 ವರ್ಷಗಳಿಂದ ಬಾಕಿ ಇರುವುದು ನಿಜವೇ;
ಆ) ಈ ಯೋಜನೆಯನ್ನು ಜಾರಿಗೊಳಿಸದೆ ಬಾಕಿ ಇಡಲು ಕಾರಣವೇನು? ಹಾಗೂ ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು;
ಇ) ರೂಪಿಸಿರುವ ಯೋಜನೆಗಳಾವುವು? ಹಾಗೂ ಅನುಷ್ಠಾನಗೊಳಿಸುವ ಜಿಲ್ಲೆ, ತಾಲ್ಲೂಕು, ಗ್ರಾಮಗಳ ವಿವರ ನೀಡುವುದು ;
ಈ) 92–93ನೇ ಸಾಲಿನಲ್ಲಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದೇ? ಅನುಷ್ಠಾನಗೊಳಿಸಲು ಆರ್ಥಿಕ ವ್ಯವಸ್ಥೆ ಒಳಪಡಿಸಲಾಗಿದೆಯೇ;
ಉ) ಈ ಬಗ್ಗೆ ಸರ್ಕಾರದಿಂದ ಅನುಷ್ಠಾನಗೊಳಿಸಲು ಮಾರ್ಗ ಸೂಚಿಯನ್ನು ನೀಡಲಾಗಿದೆಯೇ?
ಊ) ಇಲ್ಲದಿದ್ದಲ್ಲಿ, ಇದಕ್ಕೆ ಕಾರಣವೇನು? ಹಾಗೂ ಯಾವಾಗ ಹೊರಡಿಸಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವೆಯವರು) –

ಅ) ಇಲ್ಲ
ಆ) ಉದ್ಭವಿಸುವುದಿಲ್ಲ
ಇ) ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಈ) ಈ ಬಗ್ಗೆ ಯಾವ ಸೂಚನೆಗಳು ಬಂದಿರುವುದಿಲ್ಲ.
ಉ) ಇಲ್ಲ
ಊ) ಉದ್ಭವಿಸುವುದಿಲ್ಲ

ಜವಳಿ ನಿರ್ದೇಶನಾಲಯದ ಕಾರ್ಯ ಚಟುವಟಿಕೆಗಳು.

922. ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿ ಜವಳಿ ನಿರ್ದೇಶನಾಲಯ ಅಸ್ತಿತ್ವಕ್ಕೆ ಯಾವ ಸರ್ಕಾರಿ ಆದೇಶದ ಪ್ರಕಾರ ಅನುಷ್ಠಾನಗೊಳಿಸಲಾಗಿದೆ (ಸದರಿ ಆದೇಶದ ಪ್ರತಿಯನ್ನು ನೀಡುವುದು) ;
ಆ) ಪ್ರತ್ಯೇಕ ಜವಳಿ ಅಧಿಕಾರಿಯವರನ್ನು ಯಾವಾಗಿನಿಂದ ನೇಮಿಸಲಾಗಿದೆ? (ವಿವರಗಳನ್ನು ನೀಡುವುದು) ;
ಇ) ಜವಳಿ ನಿರ್ದೇಶನಾಲಯದ ಕಾರ್ಯ. ನಿರ್ದೇಶನಾಲಯದ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳ ಹೆಸರು ಪದನಾಮಗಳೊಂದಿಗೆ ಯಾವ ಯಾವ ಜಿಲ್ಲೆಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಿಳಿಸುವುದು;
ಈ) ಜಿಲ್ಲಾವಾರು ಪ್ರತ್ಯೇಕ ಜವಳಿ ನಿಗಮದ ಶಾಖಾ ಕಛೇರಿಗಳನ್ನು ಪ್ರಾರಂಭಿಸಲಾಗುವುದೆ (ಇದರಲ್ಲಿರುವ ಸಿಬ್ಬಂದಿಗಳ ಹೆಸರು ಮತ್ತು ಪದನಾಮಗಳನ್ನು ತಿಳಿಸುವುದು) ;
ಉ) ರಾಜ್ಯದಲ್ಲಿರುವ ಅಧಿಕ ಜವಳಿ ಅಭಿವೃದ್ಧಿ ಕಾರ್ಯಗಳಿರುವ ಜಿಲ್ಲೆಗಳಾವುವು? ಹಾಗೂ ಜವಳಿ ಅಭಿವೃದ್ಧಿ ಕಾರ್ಯಕ್ರಮಗಳು ಇಲ್ಲದಿರುವ ಜಿಲ್ಲೆಗಳಾವುವು (ತಿಳಿಸುವುದು);
ಊ) ಹಾಗಿದ್ದಲ್ಲಿ, ಅಧಿಕ ಕಾರ್ಯ ನಿರ್ವಹಿಸದಿರುವ ಜಿಲ್ಲೆಗಳಲ್ಲಿರುವ ಜವಳಿ ಸಿಬ್ಬಂದಿಗಳನ್ನು ಸದರಿ ಜಿಲ್ಲೆಗಳಿಂದ ಅಧಿಕ ಕಾರ್ಯಯಿರುವ ಜಿಲ್ಲೆಗಳಿಗೆ ನಿಯೋಜಿಸಲಾಗಿದೆಯೇ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ;
ಋ) ಎಷ್ಟು ಸಮಯದಲ್ಲಿ ಉತ್ತಮ ಕಾರ್ಯ ನಿರ್ವಹಿಸಲು ಅಧಿಕ ಕೈಮಗ್ಗಗಳಿರುವಲ್ಲಿಗೆ ಸದರಿ ಸಿಬ್ಬಂದಿಯನ್ನು ಸ್ಥಳಾಂತರಿಸಲಾಗುವುದು ತಿಳಿಸುವುದು;
ೠ) ರೇಷ್ಮೆ ಇಲಾಖೆಯಲ್ಲಿರುವ ಜವಳಿ ಕೈಗಾರಿಕೆಗಳನ್ನು (ಸಿಲ್ಕ್ ರೀಲಿಂಗ್, ಟ್ವಿಸ್ಟಿಂಗ್ ನೇಯ್ಗೆ) ಇತ್ಯಾದಿ ಯೋಜನೆಗಳನ್ನು ಜವಳಿ ನಿರ್ದೇಶನಾಲಯಕ್ಕೆ ವರ್ಗಾಯಿಸದಿರಲು ಕಾರಣವೇನು ? ಹಾಗೂ ಎಷ್ಟು ಸಮಯದಲ್ಲಿ ಅದನ್ನು ವರ್ಗಾಯಿಸಲಾಗುವುದು. ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) –

ಅ) ರಾಜ್ಯದಲ್ಲಿ ಜವಳಿ ನಿರ್ದೇಶನಾಲಯದ ಸರ್ಕಾರಿ ಆದೇಶದ ಸಂಖ್ಯೆ ಸಿಐ 285 ಐಸಿಎಸ್ 86 ದಿನಾಂಕ 3–6–1988ರಲ್ಲಿ ಅಸ್ತಿತ್ವಕ್ಕೆ ಬಂದಿದೆ (ಅನುಬಂಧ - 1)
ಆ) ಸರ್ಕಾರಿ ಆದೇಶದ ಸಂಖ್ಯೆ ಸಿಐ 175 ಐಸಿಎಸ್ 91 ದಿನಾಂಕ 10–7–1991 ರಲ್ಲಿ ಜವಳಿ ಆಯುಕ್ತರ ಹುದ್ದೆಯನ್ನು ಸೃಷ್ಟಿಸಲಾಗಿದೆ. (ಅನುಬಂಧ - 2)
ಇ) ವಿವರಗಳನ್ನು ಲಗತ್ತಿಸಲಾಗಿದೆ (ಅನುಬಂಧ - 3)
ಈ) ಜಿಲ್ಲಾವಾರು ಪ್ರತ್ಯೇಕ ಶಾಖಾ ಕಛೇರಿಗಳನ್ನು ಪ್ರಾರಂಭಿಸಿರುವುದಿಲ್ಲ.